ಎಲ್ಲರ ಮೇಲೆ ಮಾತೃವಾತ್ಸಲ್ಯದಿಂದ ಪ್ರೀತಿ ಮಾಡುತ್ತಿದ್ದದ್ದೇ ಇದಕ್ಕೆ ಕಾರಣ. ಹಟಮಾರಿ ಹುಡುಗನಿಗೆ, ಮೂರ್ಖ ಮಗನಿಗೆ, ತುಸು ಅಧಿಕಾರ ಹೆಚ್ಚು ಕೊಟ್ಟರೂ ಅಡ್ಡಿಯಿಲ್ಲ ಮನೆ ಒಡೆಯಬಾರದೆಂದು ಅವರು ಈ ರೀತಿ ಉದಾರತೆ ತೋರಿಸಿದರು. ಆದರೆ ಮುಸ್ಲೀಂ ಲೀಗಿನಮೇಲೆ ಇದರ ಯಾವ ಪರಿಣಾಮವೂ ಆಗಲಿಲ್ಲವಷ್ಟೇ ಅಲ್ಲ ಕಾಂಗ್ರೆಸಿಗರಾದ ಮುಸಲ್ಮಾನರೂ ಕೊನೆಗೆ ಗಾಂಧೀಜಿಯನ್ನು ನಂಬಲಿಲ್ಲ. ಅವರಿಗೆ ನಿಷ್ಠ ನಾದ ಒಬ್ಬ ಮುಖಂಡನೂ ಉಳಿಯಲಿಲ್ಲ. ಇದಾಯಿತು ಮುಸ್ಲೀಮರ ಬಗ್ಗೆ. ನೂರಕ್ಕೆ ೪೦ ರಷ್ಟು ಸ್ಥಳ ಕಾಯಿದೆ ಮಂಡಲಗಳಲ್ಲಿ ಮುಸ್ಲೀಮರಿಗೆ ಕಾದಿಡುವದರಿಂದ ಇಡೀ ಭಾರತವೇ ಪಾಕಿಸ್ತಾನವಾದೀತೆಂದು ರಾಜಾಜಿ, ವಲ್ಲಭಭಾಯಿ, ಪಂಡಿತಜಿಯವರೂ ಭಾವಿಸಿ ಗಾಬರಿಯಾದರು. ದೇಶವಿಭಜನೆ ಅನಿವಾರ್ಯವೇ ಆದರೆ ಆಗಲಿ, ಆದರೆ ಇಡೀ ಭಾರತವೇ ಪಾಕಿಸ್ತಾನವಾಗುವದು ಬೇಡವೆಂದು ಅವರು ಆಲೋಚಿಸಹತ್ತಿದರು. ಜನತೆಯ ಅಭಿಪ್ರಾಯವೂ ಇದೇ ರೀತಿಯದಾಗಿತ್ತು.

ಕಾಲಕರ್ಮ ಕೂಡಿಬಂತು !

ದೇಶವಿಭಜನೆ ಅನಿವಾರ್ಯವಾಯಿತು. ಆಳರಸರಿಗೆ, ಬ್ರಿಟಿಶರಿಗೆ ಸ್ವತಂತ್ರ ಭಾರತವು ಸಮರ್ಥ ಭಾರತವಾಗುವದು ಬೇಕಾಗಿದ್ದಿಲ್ಲ. ಅದು ದುರ್ಬಲವಾಗಿರಬೇಕೆಂಬ ಅತ್ಯಂತ ಹೀನ ವಿಚಾರದಿಂದ ಅವರು ಚದುರಂಗದಾಟ ಆಡಹತ್ತಿದರು. ಭಾರತವನ್ನು ಒಡೆದು ಎರಡು ಹೋಳು ಮಾಡುವಷ್ಟರಿಂದಲೇ ಅವರಿಗೆ ಸಮಾಧಾನವಿದ್ದಿಲ್ಲ. ಆದರೆ ೫೬೪ ದೇಶೀ ಸಂಸ್ಥಾನಿಕರಿಗೂ ಸಂಪೂರ್ಣ ಸ್ವಾತಂತ್ರ್ಯ ಕೊಡಲು ಅವರು ಯೋಚಿಸಿದರು. ಈವರೆಗೆ ಕುನ್ನಿಗಳಂತೆ ಬ್ರಿಟಿಶರ ಕಾಲು ನೆಕ್ಕುತ್ತ ಬಂದ ಅಭಿಮಾನಶೂನ್ಯರಾಗಿದ್ದ ಸಂಸ್ಥಾನಿಕರಿಗೆ, ಅವರು ಎಂದೂ ಕನಸಿನಲ್ಲಿ ಸಹ ಸ್ವತಂತ್ರತೆಯನ್ನು ಬೇಡದಿದ್ದರೂ ಅವರೆಲ್ಲರಿಗೂ ಸಂಪೂರ್ಣ ಸ್ವಾತಂತ್ರ್ಯ ಕೊಡುವ ಹವಣಿಕೆಯಲ್ಲಿ ಸರಕಾರಕ್ಕೆ ಆನಂದವಾಗಹತ್ತಿತು. ಈ ಸ್ವಾತಂತ್ರ್ಯವನ್ನು ಕೊಡುವದೇ ಆಗಿದ್ದರೆ ಸಂಸ್ಥಾನೀ ಪ್ರಜೆಗಳಿಗೆ ಕೊಡಬೇಕಾಗಿತ್ತು. ಕೆಲವೊಂದು ಸಂಸ್ಥಾನಗಳಲ್ಲಿ ಪ್ರಜೆಗಳು ಆ ರೀತಿ ಆಂದೋಲನವನ್ನೂ ಹೂಡಿದ್ದರು. ಅವರನ್ನು ಸಮಾಧಾನ ಪಡಿಸುವದನ್ನು ಬಿಟ್ಟು ಎಂದೂ ಸ್ವಾತಂತ್ರ್ಯ ಬೇಡದ ಸಂಸ್ಥಾನಿ ಯಜಮಾನರಿಗೆ ಸಂಪೂರ್ಣ ಸ್ವಾತಂತ್ರ್ಯ ದಯಪಾಲಿಸಲು ಬ್ರಿಟಿಶ ಸರಕಾರ ದುಷ್ಟಬುದ್ಧಿಯಿಂದ ಮುಂದಾಯಿತು ! ಸುಮಾರು ಆರುನೂರು ಸಂಸ್ಥಾನಿಕರು ಅಲ್ಲಲ್ಲಿ ಸ್ವತಂತ್ರ ಘಟಕಗಳನ್ನು ಸ್ಥಾಪಿಸಿದರೆ ಮೊದಲೇ ವಿಭಜನೆಯಿಂದ ದುರ್ಬಲವಾದ ಭಾರತವು ಅತ್ಯಂತ ದುರ್ಬಲವಾಗಿ ಕಡೆತನಕ ಪಾರ್ಶ್ವವಾಯುವಿನ ಬೇನೆಯಿಂದ ಬಳಲುತ್ತಿರಬೇಕೆಂಬ ನೀಚ, ಹೀನವೃತ್ತಿಯನ್ನು ಬ್ರಿಟಿಶ ಸರಕಾರ ತಳೆಯಿತು. ಪಾಕಿಸ್ತಾನ ನಿರ್ಮಾಣ ಮಾಡಿ ಹಿಂದೂ ಮುಸ್ಲೀಂ ಭೂತವನ್ನು ಎಬ್ಬಿಸಿ ಹೊರಗೂ ಒಳಗೂ ಯುದ್ಧದ

ವಾತಾವರಣ ನಿರ್ಮಿಸುವದು ಮತ್ತು ಸಂಸ್ಥಾನಿಕರಿಗೆ ಸ್ವಾತಂತ್ರ್ಯ ಕೊಟ್ಟು ಭಾರತೀಯ ಐಕ್ಯಕ್ಕೆ ನಿರಂತರವಾಗಿ ಕಿಟಿಕಿಟಿ, ತಲೆಶೂಲಿ ಉಂಟುಮಾಡುವದು, ಇಂಥ ಈ ಹೇಯವಾದ ಧೋರಣೆಯನ್ನು ರೂಪಿಸಿ ಬ್ರಿಟನ್ನು ತನ್ನ ದುಷ್ಪವೃತ್ತಿಯ ಪ್ರದರ್ಶನ ಜಗತ್ತಿಗೆ ಮಾಡಿ ಕೊಟ್ಟಿತು. ದ್ವಿತೀಯ ಮಹಾಯುದ್ಧದಲ್ಲಿ ಮಿತ್ರ ರಾಷ್ಟ್ರಗಳಿಗೆ ಜಯ ದೊರಕಿದರೂ ಅದು ನಿಜವಾಗಿ ಅಮೇರಿಕಾ ಮತ್ತು ರಶಿಯಾ ಇವೆರಡೇ ದೇಶಗಳ ಜಯವಾಗಿತ್ತು. ಬ್ರಿಟನ್ನು ಈ ಯುದ್ಧದಲ್ಲಿ ಸತ್ತು ಸತ್ತು ಉಳಿಯಿತು. ಸಾಮ್ರಾಜ್ಯವೆಲ್ಲ ನಾಶವಾಗಿ ತನ್ನಷ್ಟಕ್ಕೆ ತಾನು ಉಳಿದರೆ ಸಾಕೆಂಬ ಸ್ಥಿತಿಗೆ ಅದು ಬಂದಿತ್ತು ಜಗತ್ತಿನಲ್ಲಿಯೇ ಪ್ರಥಮ ದರ್ಜೆಯ ರಾಷ್ಟ್ರವೆಂದೂ, ತನ್ನ ಸಾಮ್ರಾಜ್ಯದ ಮೇಲೆ ಸೂರ್ಯನು ಎಂದೂ ಮುಳುಗುವದಿಲ್ಲವೆಂದೂ ಸೊಕ್ಕಿನಿಂದ ಉನ್ಮತ್ತತೆಯಿಂದ ಜಂಭಕೊಚ್ಚಿಕೊಳ್ಳುತ್ತಿದ್ದ ಬ್ರಿಟನ್ನು ಎರಡನೇ ಮೂರನೇ ತರಗತಿಯಿಂದಲೂ ಕೆಳಗಿಳಿದು ನಾಲ್ಕನೇ ತರಗತಿಯ ರಾಷ್ಟ್ರವಾಗುವ ಭಾರೀ ಅಪಮಾನದ ಸ್ಥಿತಿ ಅದಕ್ಕೆ ಒದಗಿದರೂ ಸುವಿಚಾರ ಉದಯಿಸಲಿಲ್ಲ. ಕುಟಿಲ ಕಾರಸ್ಥಾನ ಮತ್ತು ಮನೆಮುರುಕತನದ ಆಟ ಮಾಡಿಯೇ ಅದು ಸಾಮ್ರಾಜ್ಯ ಬೆಸಿಳೆತ್ತು. ಸಾಮ್ರಾಜ್ಯ ಸೂರ್ಯ ಅಸ್ತಮಿಸುವಾಗಲೂ ಅದೇ ಕುಟಿಲ ಕಾರಸ್ಥಾನ ನಡೆಯಿಸಿ ಭಾರತವನ್ನು ನಿರಂತರ ದುರ್ಬಲ ಮಾಡಿ ಈ ದೇಶದಿಂದ ಕಾಲುಕಿತ್ತುವ ಆಟ ಆಡಿತು. ಮುಸ್ಲೀಮರು ಬಹುಸಂಖ್ಯಾತರಾಗಿ ಇರುವ ಪ್ರಾಂತಗಳನ್ನು ಅಂದರೆ ಸಿಂಧ, ವಾಯವ್ಯ ಸರಹದ್ದ ಪ್ರಾಂತಗಳನ್ನು ಪೂರ್ತಿಯಾಗಿಯೂ ಪಂಜಾಬ ಮತ್ತು ಬಂಗಾಲಗಳಲ್ಲಿಯ ಮುಸ್ಲೀಮ ಬಹುಮತವುಳ್ಳ ಅರ್ಧ ಭಾಗಗಳನ್ನೂ ಕೂಡಿಸಿ ಪಾಕಿಸ್ತಾನ ನಿರ್ಮಾಣ ಮಾಡಿ ಹಾಗು ಸಂಸ್ಥಾನಿಕರಿಗೆ ಸ್ವಾತಂತ್ರ್ಯ ದಯಪಾಲಿಸಿ ತುಂಡು ತುಂಡಾದ ಭಾರತಕ್ಕೆ ಸ್ವರಾಜ್ಯ ದಾನ ಮಾಡಲು ಬ್ರಿಟಿಶ ಸರಕಾರ ನಿಶ್ಚಯಿಸಿತು. ಇಂಥ ದುರ್ಬಲ ಸ್ವಾತಂತ್ರ್ಯ ಒಪ್ಪಬಾರದೆಂದೂ ಭಾರತವನ್ನು ಹೋಳು ಮಾಡಿ ಹಾಳು ಮಾಡುವ ಬ್ರಿಟಿಶ ಕುಟಿಲತನವನ್ನು ಮನ್ನಿಸಬಾರದೆಂದೂ ಗಾಂಧೀಜಿಯವರು ಸ್ಪಷ್ಟರೀತಿಯಿಂದ ಸಲಹೆ ಕೊಟ್ಟರು. ಆದರೆ ಪಂ. ಜವಾಹರಲಾಲ, ಸರದಾರ ವಲ್ಲಭಭಾಯಿ ಪಟೇಲ, ರಾಜಾಜಿ ಮೊದಲಾದ ಕಾಂಗ್ರೆಸಿನ ವರ್ಕಿಂಗ ಕಮಿಟಿಯ ಸದಸ್ಯರೆಲ್ಲ ಅನಿವಾರ್ಯವಾಗಿ ಈ ದುರ್ಬಲ ಸ್ವರಾಜ್ಯಕ್ಕೆ ಒಪ್ಪುತ್ತ ಎನ್ನುವದಕ್ಕೆ ಮುಂದಾದರು !

ಸ್ವರಾಜ್ಯದ ಸೂರ್ಯೋದಯ

ಅರುಣೋದಯದ ಕೆಂಪು ಒಡೆದು ಸೂರ್ಯೋದಯವಾಗುವಂತೆ ಭಾರತೀಯ ಸ್ವಾತಂತ್ರ್ಯ ರವಿಯು ರಕ್ತದ ಅರುಣೋದಯವನ್ನೇ ಮೊದಲು ಕಳಿಸಿ ಕೊಟ್ಟನು. ಕುಟಿಲತನದಲ್ಲಿ ಜಗತ್ತನ್ನೇ ಮೀರಿಸಿದ ಬ್ರಿಟಿಶರು ಭಾರತೀಯ ಸ್ವಾತಂತ್ರ್ಯದ ಘೋಷಣೆ ಮಾಡಿದರು. ಅದು ಎಂಥ ಸ್ವಾತಂತ್ರ್ಯ ? ದೇಶ ವಿಭಜನೆ ಮಾಡಿ,